# ನದಿಯೊಳಗೆ ನದಿ ಬೆರೆಸಿದಂತಾಗದನ್ನಕ್ಕ!

ಬುದ್ಧನ ಅನಂತರ ಭಾರತೀಯ ಸಮಾಜದಲ್ಲಿ ಸಮಾನತೆಯ ಬಗ್ಗೆ ಚಿಂತಿಸಿ ಹೋರಾಡಿದವರಲ್ಲಿ ಬಸವಣ್ಣ ಅಗ್ರಗಣ್ಯನೆಂಬುದರ ಬಗ್ಗೆ ಎರಡು ಮಾತಿಲ್ಲ. ಅವನ ಹೋರಾಟ ಸಾಮಾಜಿಕ ಸಮಾನತೆಯನ್ನು ತರುವುದರ ಜೊತೆಗೆ ಲಿಂಗ ಸಮಾನತೆಯನ್ನು ಮೂಡಿಸುವ ನಿಟ್ಟಿನಲ್ಲಿ ಗುರಿಯನ್ನು ಹೊಂದಿತ್ತು. ಆ ಕಾರಣದಿಂದ ಭಾರತೀಯ ಸಾಮಾಜಿಕ ಚರಿತ್ರೆಯಲ್ಲಿ– ಕರ್ನಾಟಕದಲ್ಲಿ– ಹನ್ನೆರಡನೆಯ ಶತಮಾನದಲ್ಲಿ ಮಹಿಳೆಯರು ಪ್ರಧಾನವಾಗಿ ಎದ್ದುಕಾಣುತ್ತಾರೆ. ಗಂಡಿನ ಪ್ರಾಧಾನ್ಯತೆಯನ್ನು ಪ್ರಶ್ನಿಸಿ ಸತಿಪತಿಗಳು ಒಂದಾದ ಭಾವದಲ್ಲಿ ಬೆರೆತಾಗ ಮಾತ್ರ ಜೀವನದಲ್ಲಿ ಸಮಾನತೆಯ ತತ್ವವನ್ನು ಕಾಣಬಹುದೆಂದು ತಿಳಿಸಿದರು. ಇಂಥ ಆಲೋಚನಾ ಕ್ರಮದ ಹಿಂದೆ ಬಸವಣ್ಣನು ಆ ಕಾಲಘಟ್ಟದಲ್ಲಿ ಮೂಡಿಸಿದ ಸಮಾನತಾ ಸ್ವಾತಂತ್ರ್ಯದ ಬೆಳಕು ಕಾರಣವಾಗುತ್ತೆಂಬುದರಲ್ಲಿ ಸಂಶಯವಿಲ್ಲ. ಅವನು ಸಮಾಜ ವಿಜ್ಞಾನಿಯಾಗಿದ್ದಂತೆ ಮನೋವಿಜ್ಞಾನಿಯೂ ಆಗಿದ್ದನು. ವ್ಯಕ್ತಿಗೆ ಮನೋಪ್ರಪಂಚವಿರುವ ಹಾಗೆ ಒಂದು ಸಮಾಜಕ್ಕೂ ಒಂದು ಮನೋವ್ಯಾಪಾರ ಪ್ರಪಂಚವಿರುತ್ತದೆ. ಇವರೆಡರ ನಡುವೆ ತರತಮ ಬೆಸುಗೆ ಮತ್ತು ಭಾವ ಸಂಚಾರ ಸದಾ ನಡೆಯುತ್ತಿರುತ್ತದೆ. ಈ ಸಂಕೀರ್ಣ ಸಂಬಂಧಗಳನ್ನು ಬಸವಣ್ಣ ಅರಿತಿದ್ದವನಾದ್ದರಿಂದಲೇ 'ಅಂತರಂಗ ಬಹಿರಂಗ'ಗಳೆರಡರ ಶುದ್ಧಿಗಾಗಿ ಹೋರಾಡಿದ. ಅವನ ವಚನವೊಂದರಲ್ಲಿ ವ್ಯಕ್ತಿ ತನ್ನ ಸ್ವಂತ ನೆಲೆಯಲ್ಲಿ ಸಾಧಿಸಬೇಕಾದ ಸಮಾನತೆಯ ಬಗ್ಗೆ ಹೀಗೆ ನುಡಿಯುತ್ತಾನೆ:

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ, ಸಮಕಳೆ, ಸಮಸುಖವನರಿಯದನ್ನಕ್ಕ?
ಕೂಡಲ ಸಂಗಮದೇವರ ಪೂಜಿಸಿ ಫಲವೇನಯ್ಯಾ,
ನದಿಯೊಳಗೆ ನದಿ ಬೆರೆಸಿದಂತಾಗದನ್ನಕ್ಕ?

ಸ್ತ್ರೀ ಪುರುಷ ಸಂಬಂಧಗಳಲ್ಲಿ ಸಮಾನತೆಯಿರಬೇಕು. ಯಾರೂ ಮತ್ತೊಬ್ಬರ ಮೇಲೆ ಆಕ್ರಮಣ ಮಾಡಬಾರದು. ಪ್ರೀತಿಯೆಂಬುದು ನೀಡಬಹುದಾದ– ಅರ್ಪಿಸಿಕೊಳ್ಳಬಹುದಾದ ಸಾತ್ತ್ವಿಕ ಭಾವನೆಯೇ ಹೊರತು ಆಕ್ರಮಣದಿಂದ ಕಬಳಿಸಬಹುದಾದ ವಸ್ತುವಲ್ಲ. ಭಾರತೀಯ ಸಮಾಜದಲ್ಲಿ ಪ್ರೀತಿ ಮದುವೆಗಳು ಇರಲಿಲ್ಲವೆಂಬುದು ನಿಜ. (ಅಪವಾದಗಳನ್ನು ಸಾಧಾರಣೀಕರಣಗೊಳಿಸುವುದು ಸಲ್ಲ) ಬಹುಪಾಲು ಸಂದರ್ಭದಲ್ಲಿ 'ರತಿ'ಯೆಂಬುದರಲ್ಲಿ ಕೊಡುವುದರ ಬದಲು ಕಿತ್ತುಕೊಳ್ಳುವುದೇ ಇರುತ್ತಿತ್ತು. ಬೇರೆ ಲಿಂಗವೊಂದರಿಂದ ಆಕ್ರಮಣಕ್ಕೊಳಗಾಗಿ ಕೌರ್ಯಕ್ಕೆ ತುತ್ತಾಗುತ್ತಿದ್ದಾಗ 'ಸುಖ'ವೆಂಬುದು ಎಲ್ಲಿಂದ ಬರಲು ಸಾಧ್ಯ? ಅಲ್ಲಿ 'ಸಮಸುಖ' ಸಾಧ್ಯವಾಗುವುದಾದರೂ ಹೇಗೆ? ಬಸವಣ್ಣನವರ ಈ ಮಾತುಗಳಲ್ಲಿ ಸಾಮಾಜಿಕ ಪದ್ಧತಿಯಿಂದ ಉಂಟಾಗುತ್ತಿರುವ ವಿಷಮ ದಾಂಪತ್ಯದ ಅಸಮ ಬದುಕಿನ ಹೊಳಹುಗಳಿವೆ. ಬಸವಣ್ಣನ ಅವಲೋಕನಾ ದೃಷ್ಟಿ ಮತ್ತು ಗ್ರಹಿಕೆಗಳು ಅಸಾಧಾರಣವಾಗಿದ್ದವು ಎಂಬುದರ ಮೇಲೆ ಈ ವಚನ ಬೆಳಕು ಚೆಲ್ಲುತ್ತದೆ. ಈ ಬಗೆಯ ಅಸಮ ಸಂಬಂಧಗಳಲ್ಲಿ– ಅಂದರೆ ಸಮರತಿ ಮತ್ತು ಸಮಸುಖಗಳು ಸಾಧ್ಯವಾಗದಿರುವ ಸಂದರ್ಭದಲ್ಲಿ– ಲಿಂಗವ ಪೂಜಿಸಿ ದೈವಭಕ್ತರೆನ್ನಿಸಿಕೊಂಡರೆ ಏನು ಪ್ರಯೋಜನ? ಸಮರತಿ– ಸಮಸುಖಗಳನ್ನು ಸಾಧಿಸಲಾಗದವರು ಲಿಂಗವ ಪೂಜಿಸುವುದು ಆತ್ಮವಂಚನೆ ಆಗುತ್ತದೆ. ಅದು ಲೋಕ ಮೆಚ್ಚಿಸಲು ಆಡುವ ಡಾಂಬಿಕತೆಯ ಮತ್ತೊಂದು ಆಟ. ಅದು ಸಲ್ಲದು. ಅಂತರಂಗ ಶುದ್ಧಿಯಾಗದೆ, ಬಹಿರಂಗ ಶುದ್ಧಿ ಸಾಧ್ಯವಿಲ್ಲ. ಬಸವಣ್ಣ ಭಾವನೆಗಳಿಗೆ– ಆತ್ಮಚಿಂತನೆಗೆ ಹೆಚ್ಚು ಆದ್ಯತೆ ನೀಡಿದವನು. ಆದುದರಿಂದ ಅವನು ಬಾಹ್ಯ ಪೂಜೆಯನ್ನು– ಅವನು ಭಕ್ತನಾದರೂ– ಎರಡನೆಯ ಸ್ಥಾನಕ್ಕಿಳಿಸುತ್ತಾನೆ. ಅವನಿಗೆ ಗೊತ್ತು. ಕೇವಲ ಪೂಜೆಯಿಂದ ಲಿಂಗನೊಲಿಯನೆಂದು. ಹೆಣ್ಣು ಗಂಡುಗಳು ಸಮಸಮವಾಗಿ ರತಿಸುಖವನ್ನು ಅರ್ಪಿಸಿಕೊಂಡಾಗ ಮಾತ್ರ ಸಮಸುಖ ಪ್ರಾಪ್ತವಾಗುತ್ತದೆ. ಈ ಅರ್ಪಣೆಯ ನೆಲೆ ಲಿಂಗನಿಗೂ ಪ್ರಿಯ. ಈ ರೀತಿ ದೇಹ ಮನಸ್ಸುಗಳು ಕೂಡಿದಾಗ ಮಾತ್ರ ಸಮಾಗಮಕ್ಕೊಂದು ತೇಜಸ್ಸು ಬರುತ್ತದೆ. ಅದು ಗಂಡಿನದೂ ಅಲ್ಲ, ಹೆಣ್ಣಿನದೂ ಅಲ್ಲ. ಸಮಾನ ಸಮಾಗಮದಿಂದ ಉದ್ಭವವಾಗುವ 'ಸಮಕಳೆ.' ದೈಹಿಕ ನೆಲೆಯನ್ನು ಮೀರಿ ಪ್ರಾಪ್ತವಾಗುವ ಸುಖವಿದು. ಇದರಲ್ಲಿ ಸ್ವಾಭಿಮಾನದ ರಕ್ಷಣೆಯಿದೆ. ಸ್ವಾಭಿಮಾನ ಪೂರಕವಾಗಿ ಸಮತೆಯನ್ನು ಅನುಭವಿಸುವ ಸುಖವಿದು.

ಸಮಾನತೆಯ ಸುಖವೆಂಬುದು ಪ್ರಾಪ್ತವಾಗುವುದು 'ನನ್ನದು' ಎಂಬ ಅಹಂಕಾರವನ್ನು ಇಲ್ಲವಾಗಿಸಿಕೊಂಡ ಸ್ಥಿತಿಯಲ್ಲಿ ಮಾತ್ರ. ನಮ್ಮ ತನದ ಗುರುತು ಸಿಗದಂತೆ ಒಬ್ಬರಲ್ಲೊಬ್ಬರು ಬೆರೆಯಬೇಕು. ಆ ಸ್ಥಿತಿಯನ್ನು ಬಸವಣ್ಣ ಅದ್ಭುತವಾದ ಉಪಮಾತೀತ ರೂಪಕದಲ್ಲಿ ಹೀಗೆ ನುಡಿದಿದ್ದಾನೆ: 'ನದಿಯಲ್ಲಿ ನದಿ ಬೆರೆಸಿದಂತಾಗಬೇಕು' ಇದು ನಿಜವಾದ ಸಮತೆಯ ಸ್ಥಿತಿ. ಹೆಣ್ಣು ಗಂಡಿನ ಸಂಬಂಧದ ನೈಜ ಸ್ವರೂಪ ಇರಬೇಕಾದದ್ದು ಹೀಗೆ.

ಈ ವಚನ ತುಂಬ ಸಂಕೀರ್ಣವಾದುದು. ಇದು ಕೇವಲ ಲಿಂಗ ಸಂಬಂಧವನ್ನು ಕುರಿತು ಮಾತನಾಡುತ್ತಿಲ್ಲ. ತನ್ನ ಆಂತರ್ಯದಲ್ಲಿ ವರ್ಣ– ವರ್ಗಭೇದ ಕುರಿತು– ಅಲ್ಲಿ ಸಾಧಿತವಾಗಬೇಕಾದ ಸಮಾನತೆಯನ್ನು ಕುರಿತು ಮಾತನಾಡುತ್ತದೆ. ಮಾನವರೆಲ್ಲರೂ ಸಹಜ ಪ್ರೀತಿಯಿಂದ ಸಮಾನ ಮನೋಧರ್ಮದಿಂದ ನದಿಯಲ್ಲಿ ನದಿ ಬೆರೆತಂತೆ ಬದುಕು ಸಾಗಿಸಬೇಕು. ಇಲ್ಲದಿದ್ದಲ್ಲಿ ಪೂಜೆ ನಿರರ್ಥಕವೆಂದು ತಿಳಿಸುತ್ತದೆ.

■ **ಶಿಕಾಕು**

## ಮಾತೇ ಮುತ್ತು

★ ನಿಮ್ಮ ವಿರೋಧಿಯು ಸಾಮರ್ಥ್ಯದಲ್ಲಿ ಒಂದು ಇರುವೆಯಂತಿದ್ದರೂ, ಅವನನ್ನು ಒಂದು ಆನೆಯೆಂತಲೇ ತಿಳಿಯಿರಿ.

–ಡೆನ್ಮಾರ್ಕ್ ಗಾದೆ

★ ಕುಟುಂಬದ ಹೊಣೆಗಾರಿಕೆಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿದಲ್ಲಿ, ದೂರದ ದೇಗುಲಕ್ಕೆ ಹೋಗಿ ದೇವರ ದರ್ಶನ ಪಡೆದು ಬರಬೇಕಾಗಿಲ್ಲ.

–ಚೀನೀ ಗಾದೆ

★ ಮನುಷ್ಯನ ನಿಜವಾದ ಮಿತ್ರರು ಮೂವರು ಮಾತ್ರ: ಮುದಿ ಹೆಂಡತಿ, ಸಾಕು ನಾಯಿ ಮತ್ತು ಕೈಲಿರುವ ಹಣ!

–ಫ್ರಾಂಕ್ಲಿನ್

★ ಹಾಸ್ಯ ಪ್ರವೃತ್ತಿ ಇಲ್ಲದವನಿಗೆ ಬದುಕು ಹೊರಲಾರದ ಹೊರೆಯಾಗಿ ಪರಿಣಮಿಸುತ್ತದೆ.

–ಜಾರ್ಜ್ ಬರ್ನಾರ್ಡ್ ಶಾ

★ ನೀವು ಸದಾಕಾಲ ಆನಂದದಿಂದ ಇರಬೇಕೆನಿಸಿದರೆ, ನಿಮ್ಮನ್ನು ಸದಾಕಾಲ ದುಡಿಮೆಯಲ್ಲಿ ತೊಡಗಿಸಿಕೊಂಡಿರಿ.

–ಪರೋಸ್

★ ಯಾವನೊಬ್ಬನನ್ನಾಗಲೀ ಯಶದ ಹಾದಿಗೆ ಒಯ್ಯುವ ಮೂರು ಅಂಶಗಳೆಂದರೆ– ಆತ್ಮ ವಿಶ್ವಾಸ, ನಿಶ್ಚಿತ ಗುರಿ ಮತ್ತು ಸಂಯಮ.

–ಟೆನಿಸನ್

★ ಶರದೃತುವಿನ ಮೋಡಗಳು ಗುಡುಗುತ್ತವೆ, ಮಳೆ ಸುರಿಸುವುದಿಲ್ಲ! ಮಳೆಗಾಲದಲ್ಲಿ ಶಬ್ದ ಮಾಡದೆ ಮಳೆ ಸುರಿಸುತ್ತವೆ. ಅದೇ ರೀತಿ ನೀಚನು ಮಾತನಾಡುತ್ತಾನೆ, ನಡೆದುಕೊಳ್ಳುವುದಿಲ್ಲ. ಸತ್ಪುರುಷನು ಮಾತನಾಡದೆ ಕಾರ್ಯ ಮಾಡುತ್ತಾನೆ.

–ಸುಭಾಷಿತ

★ ಒಳ್ಳೆಯವರೊಡನೆ ಸೇರುವುದು ಹಾಗೂ ವಿವೇಕ– ಇವೆರಡೂ ಸ್ವಚ್ಛವಾದ ಎರಡು ಕಣ್ಣುಗಳಿದ್ದಂತೆ. ಇವುಗಳಿಲ್ಲದವನು ಕುರುಡ. ಅಂತಹವನು ಕೆಟ್ಟ ದಾರಿ ತುಳಿದರೆ ಆಶ್ಚರ್ಯವೇನು?

–ಗರುಡ ಪುರಾಣ

★ ಒಳ್ಳೆಯ ಸಮಾಜ ಕಾಣಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ಮೊದಲಿಗೆ ಅನ್ಯರ ಒಳಿತಿಗಾಗಿ, ಆ ಬಳಿಕ ತನ್ನ ಒಳಿತಿಗಾಗಿ ದುಡಿಯುವ ಮನೋಭಾವವನ್ನು ರೂಢಿಸಿಕೊಳ್ಳುವುದು ಅಗತ್ಯ.

–ಡಾ.ರಾಧಾಕೃಷ್ಣನ್

★ ಸಜ್ಜನರು ಒಳ್ಳೆಯದನ್ನು ಮಾತ್ರ ಸ್ಮರಿಸಿಕೊಳ್ಳುತ್ತಾರೆ. ಕೆಟ್ಟದ್ದನ್ನು ಮಾಡಿದರೂ ನೆನಪಿಗೆ ತಂದುಕೊಳ್ಳುವುದಿಲ್ಲ. ಅವರು ಪರೋಪಕಾರಕ್ಕಾಗಿ ಕೆಲಸ ಮಾಡುವರೇ ಹೊರತು, ಪ್ರತ್ಯುಪಕಾರವನ್ನು ಬಯಸುವುದಿಲ್ಲ.

–ಮಹಾಭಾರತ

★ ಮಹಾತ್ಮರ ಮನಸ್ಸು ಐಶ್ವರ್ಯ ಬಂದಾಗ ಕನ್ನೈದಿಲೆಯಂತೆ ಮೃದುವಾಗಿರುತ್ತದೆ. ಕಷ್ಟಗಳು ಬಂದಾಗ ದೊಡ್ಡ ಬೆಟ್ಟದ ಮೇಲಿರುವ ಕಲ್ಲುಗಳ ರಾಶಿಯಂತೆ ಕಠಿಣವಾಗಿರುತ್ತದೆ.

–ನೀತಿ ಶತಕ

★ ಕೆಟ್ಟವನ ಮನಸ್ಸು ಸಂಪತ್ತಿದ್ದಾಗ ಕರ್ಕಶ, ಆಪತ್ತು ಬಂದಾಗ ಕೋಮಲ, ತಣ್ಣಗಿರುವಾಗ ಕಬ್ಬಿಣ ಕಠೋರ, ಬಿಸಿಯಾದಾಗ ಮೃದು.

–ದೃಷ್ಟಾಂತಕಲಿಕಾ